೧,೨,೩,೪



# ಎಲ್ಲಕ್ಕಿಂತ ದೊಡ್ಡ ಪ್ರಾಣಿ

## ಗೊಂಬೆಯಾಟದ ಸಂಭಾಷಣೆಗಳು

ಆತ್ಮೀಯ ಶಿಕ್ಷಕರೇ,

ಶ್ರೀ ಗಣೇಶ ಪಿ. ನಾಡೋರ ಅವರ 'ಕಪ್ಪೆಮರಿಯ ಅನುಮಾನ' ಕಥೆ ಆಧಾರಿತ ಗೊಂಬೆಯಾಟ ಇಲ್ಲಿದೆ. ಗೊಂಬೆಯಾಟದ ಚಿತ್ರಕಥೆ ಬರೆದವರು ಧ್ವನಿ ಬಳಗದ ಶ್ರೀನಿವಾಸ ಅಣ್ಣ.

ಸರಳ ಗೊಂಬೆಯಾಟದಲ್ಲಿ ಬರುವ ಪ್ರಾಣಿಗಳ ಪಾರದರ್ಶಕ ಗೊಂಬೆಗಳು ಇಲ್ಲಿವೆ. ಇವುಗಳನ್ನು ಕಡ್ಡಿಗೊಂಬೆಗಳನ್ನಾಗಿ ಸಿದ್ಧಪಡಿಸಿಕೊಂಡು ಗೊಂಬೆಯಾಟ ಆಡಿಸಬಹುದು. ಈ ಬಗ್ಗೆ ಕೆಲವು ಸೂಚನೆಗಳು ಇಲ್ಲಿವೆ:

* ಮೊದಲು, ಶಿಕ್ಷಕರು ಚಿತ್ರಕಥೆಯನ್ನು ತಾವೇ ಒಂದು ಸಲ ಓದಿಕೊಳ್ಳುವುದು.
* ನಂತರ ಮಕ್ಕಳಿಗೆ ಗಟ್ಟಿಯಾಗಿ ಓದಿ ಹೇಳುವುದು.
* ಅನಂತರ, ಗೊಂಬೆಗಳಿಗೆ ಎರಡೂ ಬದಿ ಸೂಕ್ತ ಬಣ್ಣ ಹಚ್ಚಿ (ಕ್ರೆಯಾನ್/ಬಣ್ಣದ ಪೆನ್ಸಿಲ್ ಒಳ್ಳೆಯದು) ಸಿದ್ಧಪಡಿಸಿಕೊಳ್ಳುವುದು.
* ಗೊಂಬೆಗಳಿಗೆ ತೆಂಗಿನ ಕಡ್ಡಿಯನ್ನು (ಪೊರಕೆ ಕಡ್ಡಿ – ಅಂದಾಜು 8–10 ಇಂಚು ಉದ್ದ) ಸೆಲ್ಲೊಟೇಪ್ ಸಹಾಯದಿಂದ ಅಂಟಿಸುವುದು.
* ಅನಂತರ, ಪಾತ್ರಗಳನ್ನು ಹಂಚಿ, ಅವರವರ ಮಾತು ಕಲಿಸುವುದು.
* ಗೊಂಬೆಗಳನ್ನು ಸೂಚನೆಗೆ ಅನುಗುಣವಾಗಿ ಆಡಿಸುತ್ತಾ, ಮಾತು ಹೇಳುವುದನ್ನು ಕಲಿಸುವುದು.

ಮಾದರಿ ಗೊಂಬೆ



ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಜನವರಿ-ಫೆಬ್ರವರಿ-ಮಾರ್ಚ್ ೨೦೧೮-೧೯

ಆರಂಭ ಯೋಜನೆ
Arambha 2018-19 Project
is Supported by Many
Individual Donors

# ಎಲ್ಲಕ್ಕಿಂತ ದೊಡ್ಡ ಪ್ರಾಣಿ

**ಪಾತ್ರ ಪರಿಚಯ:**
* ಕಪ್ಪೆಮರಿ
* ತಾಯಿಕಪ್ಪೆ
* ಆನೆ
* ಕತ್ತೆ
* ನೀಲಿತಿಮಿಂಗಿಲ

**ದೃಶ್ಯ ೧**
(ತಾಯಿಕಪ್ಪೆ ಮತ್ತು ಕಪ್ಪೆಮರಿಯ ನಡುವಿನ ಸಂಭಾಷಣೆ)

**ಕಪ್ಪೆಮರಿ:** ಅಮ್ಮ, ಅಮ್ಮಾ..., ನನಗೊಂದು ಪ್ರಶ್ನೆ ಕಾಡತಿದೆ!
**ತಾಯಿಕಪ್ಪೆ:** ಹೌದಾ ನನ್ನ ಮುದ್ದು ಬಂಗಾರ? ಏನದು ನಿನ್ನ ಪ್ರಶ್ನೆ? ಹೇಳು ನೋಡೋಣ.
**ಕಪ್ಪೆಮರಿ:** ಅಮ್ಮಾ, ಈ ಪ್ರಪಂಚದಲ್ಲಿ ಅತಿ ದೊಡ್ಡ ಪ್ರಾಣಿ ಯಾವುದು ಇರಬಹುದು ಅಂತೀಯಾ?
**ತಾಯಿಕಪ್ಪೆ:** ಮತ್ಯಾವುದು ಮಗಳೇ, ನಮ್ಮ ಆನೆರಾಯನೇ!
**ಕಪ್ಪೆಮರಿ:** (ತಲೆ ಅಲ್ಲಾಡಿಸುತ್ತಾ) ಊಹೂಂ, ಆನೆರಾಯ ಅಲ್ಲ ಅನಿಸತ್ತೆ, ಅಮ್ಮ!
**ತಾಯಿಕಪ್ಪೆ:** ಮತ್ಯಾವುದು?
**ಕಪ್ಪೆಮರಿ:** ಆನೆರಾಯ ಅಂತೂ ಅಲ್ಲ ಅಮ್ಮ. ಬೇರೆ ಯಾವುದೊ ಪ್ರಾಣಿ ಇರಬೇಕು ಅಂತ ನನಗೆ ಅನಿಸ್ತಿದೆ.
**ತಾಯಿಕಪ್ಪೆ:** ಹೇಗೆ ಹೇಳ್ತಿಯಾ?
**ಕಪ್ಪೆಮರಿ:** ನನಗೆ ಅನುಮಾನ!
**ತಾಯಿಕಪ್ಪೆ:** ನಿನಗೆ ಅನುಮಾನ ಇದ್ದರೆ ಆಗುತ್ತಾ? ಬೇರೆ ಯಾರನ್ನಾದರೂ ಕೇಳು. ಆನೆರಾಯನೇ ಅತಿ ದೊಡ್ಡ ಪ್ರಾಣಿ ಅಂತ ಹೇಳ್ತಾರೆ, ನಂಗೊತ್ತು.
**ಕಪ್ಪೆಮರಿ:** ಆಯಿತಮ್ಮ ಈಗಲೇ ಹೋಗಿ ಕೇಳ್ತಿನಿ.
**ತಾಯಿಕಪ್ಪೆ:** ಆಯಿತು ಮರಿ ಹೋಗಿ ಕೇಳು. (ಕಪ್ಪೆ ಮರಿ ಹೊರಹೋಗುತ್ತದೆ)
**ತಾಯಿಕಪ್ಪೆ:** ಹುಚ್ಚು ಹುಡುಗಿ!

**(ಪರದೆ ಬೀಳುತ್ತದೆ)**

**ದೃಶ್ಯ ೨**
(ಕಪ್ಪೆಮರಿ ಕುಪ್ಪಳಿಸುತ್ತ ಕುಪ್ಪಳಿಸುತ್ತಾ ಕಾಡಿನ ದಾರಿಯಲ್ಲಿ ಹೋಗುತ್ತಿರುತ್ತದೆ.)

**ಕಪ್ಪೆಮರಿ:** ಈ ಜಗತ್ತಿನಲ್ಲಿ ಆನೆಗಿಂತ ದೊಡ್ಡಪ್ರಾಣಿ ಏನಾದರೂ ಇದೆಯೆ? ಅಂತ ಪತ್ತೆ ಹಚ್ಚಬೇಕು. (ಸ್ವಲ್ಪ ದೂರ ಕುಪ್ಪಳಿಸುತ್ತದೆ)
ಇಲ್ಲೀ ತನಕ ನಾಯಿ, ನರಿ, ಕರಡಿ, ಜಿಂಕೆ . . . . . .ಇನ್ನೂ ಎಷ್ಟೋ ಪ್ರಾಣಿಗಳನ್ನು

ಕೇಳಿದೆ. ಅವೆಲ್ಲಾ ಆನೇನೇ ಅತೀ ದೊಡ್ಡ ಪ್ರಾಣಿ ಅಂತ ಹೇಳಿದವು...(ಕತ್ತೆಯೊಂದು ಎಡಬದಿಯಿಂದ ಪ್ರವೇಶಿಸುತ್ತದೆ) ಹಾಂ! ಈಗ ಇಲ್ಲಿ ಕತ್ತೆಯಣ್ಣ ಬರುತ್ತಿದ್ದಾನೆ. ಆತನನ್ನೇ ಕೇಳುತ್ತೇನೆ. . . . .(ಕತ್ತೆ ಹತ್ತಿರ ಬರುತ್ತದೆ) ಕತ್ತೆಯಣ್ಣ ಕತ್ತೆಯಣ್ಣ...

**ಕತ್ತೆ:** ಓಹ್! ಯಾರಪ್ಪಾ ಅದು? ಇಷ್ಟು ಉತ್ಸಾಹದಿಂದ ನನ್ನನ್ನ ಕೂಗತಾ ಇರೋವ್ರು?

**ಕಪ್ಪೆಮರಿ:** ಅಣ್ಣ ಅಣ್ಣ ನಾನು!

**ಕತ್ತೆ:** ಓಹ್! ಕಪ್ಪೆಮರಿ!! ಏನು ಕಪ್ಪೆಮರಿ? ಯಾಕೆ ನನ್ನನ್ನ ಕೂಗಿದ್ದು?

**ಕಪ್ಪೆಮರೆ:** ಕತ್ತೆಯಣ್ಣ ನನಗೊಂದು ಅನುಮಾನ?

**ಕತ್ತೆ:** ಏನು?

**ಕಪ್ಪೆಮರಿ:** ನೀನು ನೋಡಿದ ಅತಿದೊಡ್ಡ ಪ್ರಾಣಿ ಯಾವುದು?

**ಕತ್ತೆ:** ಇದೆಂಥಾ ದೊಡ್ಡ ಪ್ರಶ್ನೆ ಮರಿ! ಮತ್ತ್ಯಾವುದು? ಆನೆ. ಅದಕ್ಕಿಂತ ದೊಡ್ಡ ಪ್ರಾಣಿಯನ್ನು ನಾನು ಕಂಡೇ ಇಲ್ಲ.

**ಕಪ್ಪೆಮರಿ:** ಕತ್ತೆಯಣ್ಣ, ಆನೆಗಿಂತಲೂ ದೊಡ್ಡ ಪ್ರಾಣಿ ಇದೆ. ನೀನು ಎಲ್ಲಾದರೂ ನೋಡಿರಬೇಕು ನೆನಪಿಸಿಕೊ.

**ಕತ್ತೆ:** ಅಯ್ಯೋ! ಕಪ್ಪೆಮರಿ, ನಿನಗೇನು ಹುಚ್ಚೆ? ಈ ಜಗತ್ತಿನಲ್ಲಿ ಆನೆಗಿಂತ ದೊಡ್ಡ ಪ್ರಾಣಿ ಯಾವುದೂ ಇಲ್ಲವೇ ಇಲ್ಲ!

**ಕಪ್ಪೆಮರಿ:** ಕತ್ತೆಯಣ್ಣ, ನೀನು ನಿಜವಾಗಲೂ ದೊಡ್ಡ ಕತ್ತೆನೇ.

**ಕತ್ತೆ:** (ಕೋಪದಿಂದ) ಏಯ್, ಹುಷಾರಾಗಿ ಮಾತಾಡು. ನನಗೆ ದೊಡ್ಡಕತ್ತೆ ಗಿತ್ತೆ ಅಂತ ಕರೆದರೆ ನಾನು ಸುಮ್ಮನಿರೋದಿಲ್ಲಾ.

**ಕಪ್ಪೆಮರಿ:** ಕ್ಷಮಿಸು ಅಣ್ಣಾ. ತಪ್ಪಾಯ್ತು! ಮತ್ತೆ ನಾನು ನಿನ್ನನ್ನ ಏನಂತ ಕರೀಲೀ?

**ಕತ್ತೆ:** ಸುಮ್ಮನೇ ಕತ್ತೆ ಅಂತ ಮಾತ್ರ ಕರೀ ಸಾಕು!

**ಕಪ್ಪೆಮರಿ:** ಹಾಗೇ ಆಗಲೀ ಅಣ್ಣ.

**ಕತ್ತೆ:** (ಹಣೆ ಬಡಿದುಕೊಂಡು, ಪ್ರೇಕ್ಷಕರನ್ನು ಉದ್ದೇಶಿಸಿ. . . .) ಅಯ್ಯೋ ಈ ಕಪ್ಪೆಮರಿಗೆ ನಿಜವಾಗಿಯೂ ಹುಚ್ಚು ಹಿಡಿದಿದೆ. (ಎಂದು ಹೇಳುತ್ತಾ ಅಲ್ಲಿಂದ ಹೊರಟು ಹೋಗುತ್ತದೆ)

**ಕಪ್ಪೆಮರಿ:** ಆಯ್ಯೋ, ಯಾರನ್ನು ಕೇಳಿದರೂ ಆನೆಯೇ ಅತಿ ದೊಡ್ಡ ಪ್ರಾಣಿ ಎಂದು ಹೇಳ್ತಾರೆ. ಆದರೆ ನನ್ನ ಅನುಮಾನ ಹಾಗೇ ಉಳಿದಿದೆ. ನೋಡೋಣ. ಇನ್ನಷ್ಟು ಹುಡುಕೋಣ. (ಕಪ್ಪೆ ಮರಿ ರಂಗದಿಂದ ನಿರ್ಗಮಿಸುತ್ತದೆ.)

## ದೃಶ್ಯ ೩

(ತಾಯಿಕಪ್ಪೆ, ಮರಿಕಪ್ಪೆ ಆಟವಾಡಿಕೊಳ್ಳುತ್ತಿದ್ದಾವೆ. ಸ್ವಲ್ಪ ಸಮಯದ ಬಳಿಕ ಆನೆಯೊಂದು ಕೋಪದಿಂದ ಘೀಳಿಡುತ್ತಾ ರಂಗವನ್ನು ಪ್ರವೇಶಿಸುತ್ತದೆ.)

**ಆನೆ:** ಕಪ್ಪೆಯಮ್ಮ ಕಪ್ಪೆಯಮ್ಮಾ... ನಿನ್ನ ಮರಿಗೆ ಭಾರೀ ಭಾರಿ ಸೊಕ್ಕು ಬಂದಿದೆ. ಅದರಿಂದ ನನಗೂ ವಿಪರೀತ ಸಿಟ್ಟು ಬಂದಿದೆ!

**ತಾಯಿಕಪ್ಪೆ:** ಏನಾಯಿತು? ಆನೆರಾಯರೇ, ಶಾಂತವಾಗಿ ಮಾತನಾಡಿರಿ. ತಾವು ದೊಡ್ಡವರು!

**ಆನೆ:** (ಶಾಂತವಾಗಿ) ಅದನ್ನು ನೀನು ಹೇಳ್ತೀಯಾ ಅಂತ ನನಗೆ ಗೊತ್ತು. ಆದರೆ, ಆದರೆ ಈ ನಿನ್ನ ಮಗಳು ಏನ್ ಹೇಳ್ತಿದ್ದಾಳೆ ಗೊತ್ತಾ?

**ತಾಯಿಕಪ್ಪೆ:** (ಹೆದರಿದಂತೆ) ಏನ್ ಹೇಳ್ತಿದ್ದಾಳೆ?

**ಆನೆ:** ಈ ಜಗತ್ತಿನಲ್ಲಿ ಅತಿ ದೊಡ್ಡ ಪ್ರಾಣಿ ನಾನು – ಆನೆ ಇರಲಿಕ್ಕಿಲ್ಲ ಅಂತ ಹೇಳಿಕೊಂಡು ತಿರುಗಾಡುತ್ತಿದೆ. ತಾನು ಕೆಡೋದು ಅಲ್ಲದೇ ಇಡೀ ಕಾಡನ್ನೂ ಕೆಡಸ್ತಿದೆ. ನನಗೆ ಈ ಕಾಡಲ್ಲಿ ಎಷ್ಟೊಂದು ಮರ್ಯಾದೆ ಇದೆ. ಆದರೆ ಈ ನಿನ್ನ ಮಗಳು ಅದಕ್ಕೆ ಹಾನಿ ಮಾಡ್ತಿದ್ದಾಳೆ. ನಾನು ಯಾರು ಅಂತ ಗೊತ್ತಲ್ಲ?

**ತಾಯಿಕಪ್ಪೆ:** ಅಯ್ಯೋ ಆನೆರಾಯರೇ, ಎಂತಾ ಮಾತು. ನಿಮ್ಮ ಬಗ್ಗೆ ನನಗೆ ಗೊತ್ತಿದೆ. ನಿನಗೆ ಯಾರೊ ಸುಳ್ಳು ಹೇಳಿರಬೇಕು. ಈಗಲೇ ನನ್ನ ಮರಿನ ಕರೆದು ಕೇಳ್ತಿನಿ.

**ತಾಯಿಕಪ್ಪೆ:** ಏ ಮಗಳೇ ಬಾರೆ ಇಲ್ಲಿ.

**ಕಪ್ಪೆಮರಿ:** ಏನಮ್ಮ?

**ತಾಯಿಕಪ್ಪೆ:** ಯಾಕಮ್ಮಾ? ಆನೆಯ ಬಗ್ಗೆ ಏನೇನೋ ಇಲ್ಲಸಲ್ಲದ್ದು ಹೇಳ್ತೀಯಂತೆ?

**ಆನೆ:** (ಕಪ್ಪೆಯಮ್ಮನನ್ನು ತಡೆದು) ಕಪ್ಪೆಯಮ್ಮ ಮೊದಲು ಕೇಳು, ಜಗತ್ತಿನ ದೊಡ್ಡ ಪ್ರಾಣಿ ಯಾವುದು? ಅಂತ.

**ತಾಯಿಕಪ್ಪೆ:** ಯಾವುದು ಹೇಳೆ.

**ಕಪ್ಪೆಮರಿ:** ಆನೆಯಂತೂ ಅಲ್ಲಮ್ಮ. ಬೇರೆ ಯಾವುದೋ ಪ್ರಾಣಿ ಇದ್ದೇ ಇರಬೇಕು!! ಇದು ನನ್ನ ಅನುಮಾನ.

**ಆನೆ:** ಹೇಗೆ ಹೇಳ್ತೀಯ?

**ಕಪ್ಪೆಮರಿ:** ಹೇಳಿದೆನಲ್ಲಮ್ಮಾ, ನಂಗೆ ಅನುಮಾನ ಅಂತ.

**ಆನೆ:** (ಕೋಪದಿಂದ) ನೋಡು, ನೋಡು. ಇಷ್ಟಿದ್ದಾಳೆ ನಿನ್ನ ಮಗಳು; ಎಷ್ಟು ಸೊಕ್ಕು!!! ಒಂದೇ ಏಟಿನಲ್ಲಿ ಇವಳನ್ನ ಚಟ್ನಿ ಮಾಡಿಬಿಡಬಲ್ಲೇ, ಗೊತ್ತಲ್ಲ?!

**ತಾಯಿಕಪ್ಪೆ:** (ದೈನ್ಯದಿಂದ) ಸ್ವಾಮಿ. ನೀವು ದಯವಿಟ್ಟು ಶಾಂತರಾಗಿ. ನಾನು ಇವಳಿಗೆ ಬುದ್ಧಿ ಹೇಳ್ತೇನೆ. (ಮಗಳಿಗೆ) ಆನೆರಾಯನಲ್ಲಿ ಕ್ಷಮೆ ಕೇಳು

**ಕಪ್ಪೆಮರಿ:** (ಹಠದ ಸ್ವರದಲ್ಲಿ) ನಾನೇಕೆ ಕ್ಷಮೆ ಕೇಳಬೇಕು, ಅಮ್ಮಾ? ನಾನೇನೂ ತಪ್ಪು ಮಾಡಿಲ್ಲ.

**ತಾಯಿಕಪ್ಪೆ:** (ಕೋಪದಿಂದ) ನನಗೆ ಎದುರಾಡ್ತಿಯಾ? ಟಪ್, ಟಪ್ (ಹೊಡೆಯುತ್ತದೆ)

**ಕಪ್ಪೆಮರಿ:** ಹೂಂ ಹೂಂ ಹೂಂ (ಅಳುವುದಕ್ಕೆ ಶುರುಮಾಡುತ್ತದೆ)

**ಆನೆ:** ಕಪ್ಪೆಯಮ್ಮ, ಕೇಳಿಲ್ಲಿ. ಮತ್ತೆ ಇದು ಹೀಗೇನೇ ಮುಂದುವರೆದರೆ ನಿನ್ನ ಮರಿ ಬದುಕುಳಿಯುವುದಿಲ್ಲ ಹುಷಾರ್ (ಅಲ್ಲಿಂದ ಹೊರಟು ಹೋಗುತ್ತದೆ)

**ತಾಯಿಕಪ್ಪೆ:** (ಮಗಳಿಗೆ) ನೀನು ಇಲ್ಲೆ ಬಿದ್ದಿರು. ನಾನು ಒಳಗೆ ಹೋಗ್ತಿನಿ.

**ಕಪ್ಪೆಮರಿ:** (ಸ್ವಗತ) ಏನಾದರಾಗಲಿ. ನಾನು ಜಗತ್ತಿನ ಅತಿ ದೊಡ್ಡ ಪ್ರಾಣಿ ಆನೆ ಅಂತು ಅಲ್ಲ. ಬೇರೆ ಯಾವುದೋ ಪ್ರಾಣಿ ಇದೆ. ಅದನ್ನು ಹುಡುಕಲೇ ಬೇಕು. ಅಮ್ಮಗೂ ಹೇಳುವುದು ಬೇಡ. ನಾನು ಈಗಲೇ ಹೊರಡುತ್ತೇನೆ. (ಕಪ್ಪೆಮರಿ ಅಲ್ಲಿಂದ ಹೊರಡುತ್ತದೆ)

## ದೃಶ್ಯ ೪

(ಸಮುದ್ರ ತೀರ. ಕಪ್ಪೆಮರಿ ಕುಪ್ಪಳಿಸುತ್ತಾ ಅಲ್ಲಿಗೆ ಬರುತ್ತದೆ.)

**ಕಪ್ಪೆಮರಿ:** ಎಷ್ಟೋ ದಿನಗಳು ಕಳೆದವು. ಸಿಕ್ಕ ಸಿಕ್ಕ ಪ್ರಾಣಿಗಳನ್ನೆಲ್ಲಾ ಕೇಳಿ ಆಯಿತು. ಎಲ್ಲಾ ಪ್ರಾಣಿಗಳ ಉತ್ತರನೂ ಆನೆ. ಆದರೆ ನನ್ನ ಅನುಮಾನ ಮಾತ್ರ ಹೋಗಲಿಲ್ಲ. ಇಷ್ಟೆಲ್ಲಾ ತಿರುಗಾಡಿ ಈ ಸಮುದ್ರದ ಮುಂದೆ ಬಂದಿದಿನಿ. (ಸ್ವಲ್ಪ ಹೊತ್ತಿನಲ್ಲಿ ಸಮುದ್ರದೊಳಗಿನ

ಮೀನು ಕಾಣಿಸಿಕೊಳ್ಳುತ್ತದೆ) ಓಹ್. ಮೀನು!! ಈ ಮೀನಿಗೇನಾದರೂ ಗೊತ್ತಿರುತ್ತೇನೋ ಕೇಳೋಣ.

**ಕಪ್ಪೆಮರಿ:** ಮೀನಣ್ಣ, ಹೋಯ್ ಮೀನಣ್ಣ

**ಮೀನು:** ಏನು ಕಪ್ಪೆಮರಿ.

**ಕಪ್ಪೆಮರಿ:** ಮೀನಣ್ಣ ಮೀನಣ್ಣ, ಜಗತ್ತಿನ ಅತಿದೊಡ್ಡ ಪ್ರಾಣಿ ಯಾವುದು ಅಂತ ನಿನಗೆ ಗೊತ್ತಾ?

**ಮೀನು:** ಹೌದು, ಗೊತ್ತು.

**ಕಪ್ಪೆಮರಿ:** ಅಯ್ಯೋ! ದೇವರೆ, ಇದಾದರೂ ಆನೆಯ ಹೆಸರು ಹೇಳದಿದ್ದರೆ ಸಾಕು ಅಂತ (ಮನಸ್ಸಲ್ಲೆ ಅಂದುಕೊಳ್ಳುತ್ತಾ) ಅದರ ಹೆಸರು ಹೇಳು ನೋಡೋಣ.

**ಮೀನು:** ನೀಲಿತಿಮಿಂಗಿಲ!

**ಕಪ್ಪೆಮರಿ:** ಏನಂದೆ? ಏನಂದೆ? ಇನ್ನೊಂದು ಸರಿ ಹೇಳು.

**ಮೀನು:** ಎಷ್ಟು ಸಾರಿ ಹೇಳಿದರೂ ನೀಲಿತಿಮಿಂಗಿಲನೇ ಜಗತ್ತಿನ ಅತಿ ದೊಡ್ಡ ಪ್ರಾಣಿ!

**ಕಪ್ಪೆಮರಿ:** ಆನೆಗಿಂತ ದೊಡ್ಡ ಪ್ರಾಣಿ ತಾನೆ?!

**ಮೀನು:** ಅಯ್ಯೋ ಹುಚ್ಚ. ಆನೆಗಿಂತ ಇಪ್ಪತ್ತು ಪಟ್ಟು ದೊಡ್ಡದು ಗೊತ್ತಾ?

**ಕಪ್ಪೆಮರಿ:** (ಕುಣಿಯುತ್ತಾ) ಹಾಗಾದರೆ, ಮೀನಣ್ಣ ಮೀನಣ್ಣ ಮೊದಲು ನನಗೆ ನೀಲಿತಿಮಿಂಗಿಲ ತೋರಿಸ್ತೀಯಾ?

**ಮೀನು:** ಅದಕ್ಕೇನಂತೆ ಬಾ ನನ್ನ ಬೆನ್ನ ಮೇಲೆ ಕೂತುಕೊ. ಕರೆದುಕೊಂಡು ಹೋಗುತ್ತೇನೆ.

**ಕಪ್ಪೆಮರಿ:** (ಮೀನಿನ ಮೇಲೆ ಕುಳಿತುಕೊಳ್ಳುವಂತೆ ನಟಿಸುತ್ತ) ಮೀನಣ್ಣ ನಿಜ ತಾನೇ? ನೀನು ಹೇಳ್ತಿರೊದು.

**ಮೀನು:** ಹೌದು ಕಪ್ಪೆಮರಿ. ನೀನು ನೋಡುವಂತೆ ಬಾ.
(ಸ್ವಲ್ಪ ದೂರ ಕ್ರಮಿಸಿದ ಬಳಿಕ, ರಂಗದ ಒಂದು ಬದಿ ನೀಲಿ ತಿಮಿಂಗಲ ಕಾಣಿಸಿಕೊಳ್ಳುತ್ತದೆ)

**ಕಪ್ಪೆಮರಿ:** (ಅತೀ ಅಚ್ಚರಿಯಿಂದ) ಅದೇನು ಮೀನಣ್ಣ? ಮುಂದೆ ಯಾವುದೋ ಬೆಟ್ಟ ಇರುವಂತೆ ಕಾಣುತ್ತೆ. ಅಲ್ಲಿಗೆ ಯಾಕೆ ಹೋಗುತ್ತಿದ್ದಿಯಾ?

**ಮೀನು:** ಅಯ್ಯೋ ಪೆದ್ದ. ಅದು ಬೆಟ್ಟ ಅಲ್ಲ! ಸರಿಯಾಗಿ ನೋಡು. ಅದೇ ನೀಲಿತಿಮಿಂಗಿಲ!!

**ಕಪ್ಪೆಮರಿ:** (ಅತಿ ಅಚ್ಚರಿಯಿಂದ) ಅಯ್ಯಪ್ಪಾ! ಇಷ್ಟು ದೊಡ್ಡ ಪ್ರಾಣಿ ಇದೆ ಅಂತ ನನ್ನ ಕನಸಲ್ಲೂ ಊಹಿಸಿಲ್ಲ.

**ಮೀನು:** ಹೌದು, ನೀಲಿತಿಮಿಂಗಲ ಅಂದರೆ ಏನು ಅಂದುಕೊಂಡಿದಿಯಾ?!

**ಕಪ್ಪೆಮರಿ:** ಹಾಗಾದರೆ ನಮ್ಮ ಕಾಡಿನ ಆನೆರಾಯ ಇದರ ಒಂದು ತುತ್ತಿಗೂ ಸಾಕಾಗಲ್ಲ ಅನ್ನು.

**ಮೀನು:** ಇಲ್ಲ ಇಲ್ಲ ನೀನು ತಪ್ಪು ತಿಳಿದಿದಿಯಾ. ನೀಲಿತಿಮಿಂಗಿಲ ದೊಡ್ಡ ಪ್ರಾಣಿಗಳನ್ನು ತಿನ್ನಲ್ಲ.

**ಕಪ್ಪೆಮರಿ:** ಮತ್ತೆ ಏನು ತಿನ್ನುತ್ತದೆ?.

**ಮೀನು:** ಇದು ಕ್ರಿಲ್ ಎಂಬ ಸೀಗಡಿಗಳಂಥ ಸಣ್ಣ ಪ್ರಾಣಿಗಳನ್ನು ತಿಂದು ಬದುಕುತ್ತದೆ.

**ಕಪ್ಪೆಮರಿ:** ಹೌದಾ... ಹಾಗಾದರೆ ಅದರ ಹೊಟ್ಟೆ ತುಂಬಲು ಎಷ್ಟು ದಿನ ಬೇಕಾಗಬಹುದು.

**ಮೀನು:** ಓಹೋ! ಅದು ಹಾಗೆಲ್ಲ ಒಂದೊಂದೇ ಪ್ರಾಣಿಗಳನ್ನು ಹೆಕ್ಕಿ ಹೆಕ್ಕಿ ತಿನ್ನುವುದಿಲ್ಲ. ಅದರ ಬಾಯಲ್ಲಿನ ಹಲ್ಲುಗಳಿಗೆ ಬದಲು ಕುಂಚದಂತಿರುವ ಹಲಗೆಗಳಿರುತ್ತವೆ. ಅವು ಬಾಯೊಳಗೆ ಮೇಲಿಂದ ಕೆಳಗೆ ನೇತಾಡುವಂತೆ ರಚಿತವಾಗಿವೆ. ಹಸಿವಾದಾಗ ಅದು ತನ್ನ ಬಾಯಿಯನ್ನು ತೆರೆದುಕೊಂಡು ಕ್ರಿಲ್‌ಗಳು ಇರುವ ಜಾಗದಲ್ಲಿ ಈಜಿಕೊಂಡು ಹೋಗುತ್ತದೆ. ಆಗ ಸಾವಿರ ಸಾವಿರಗಟ್ಟಲೆ ಪುಟ್ಟಜೀವಿಗಳು ಅದರ ಬಾಯನ್ನು

ಸೇರಿಬಿಡುತ್ತವೆ.

**ಕಪ್ಪೆಮರಿ:** ಅಬ್ಬಾ! ಭಾರೀ ವಿಚಿತ್ರ! ಅಂತೂ ನನ್ನ ಅನುಮಾನ ನಿಜವಾಯ್ತು. ಆನೆಗಿಂತ ದೊಡ್ಡದಾದ ಪ್ರಾಣಿ ಸಿಕ್ಕೇಬಿಟ್ಟಿತು. ದಯವಿಟ್ಟು ನನ್ನನ್ನು ದಂಡೆಯ ಮೇಲೆ ಬಿಡುವೆಯಾ?

**ಮೀನು:** ಖಂಡಿತ ಬಾ ಹೋಗೋಣ. (ದಂಡೆಗೆ ಕಪ್ಪೆಮರಿ ಜಿಗಿಯುತ್ತದೆ.)

**ಕಪ್ಪೆಮರಿ:** ಬಹಳ ಬಹಳ ಧನ್ಯವಾದಗಳು ಮೀನಣ್ಣ. ಬಹಳ ದಿನಗಳಿಂದ ಇದ್ದ ನನ್ನ ಅನುಮಾನ ನಿನ್ನಿಂದ ಇವತ್ತು ಪರಿಹಾರ ಆಯಿತು. ನನಗೆ ಈಗ ಬಹಳ ಖುಷಿಯಾಗಿದೆ. ಈಗಲೇ ನನ್ನ ಕಾಡಿಗೆ ಹೋಗುತ್ತೇನೆ. ಎಲ್ಲರಿಗೂ ಈ ವಿಷಯ ತಿಳಿಸ್ತೇನೆ. ನಿನಗೆ ಮತ್ತೊಮ್ಮೆ ಧನ್ಯವಾದಗಳು... ಬೈ....ಬೈ...ಟಾ...ಟಾ!

**ಮೀನು:** ಬೈ....ಬೈ..ಟಾ...ಟಾ!

(ಕಪ್ಪೆಮರಿ: ಖುಷಿಯಿಂದ ಕುಣಿಯುತ್ತಾ ಕಾಡಿನತ್ತ ಹೋಗುತ್ತದೆ.)

## ದೃಶ್ಯ-೫

(ಕಾಡು - ಎಲ್ಲ ಪ್ರಾಣಿ-ಪಕ್ಷಿಗಳು ಸೇರಿವೆ. ತಾಯಿ ಕಪ್ಪೆಯೂ, ಆನೆಯೂ ಇದೆ.)

**ಆನೆ:** ಹಾಂ. ಕಪ್ಪೆಮರಿ. ನಿನಗೆ ಗೊತ್ತಾಗಿರೋ ವಿಷಯವನ್ನು ಈಗ ನಮಗೂ ಎಲ್ಲರಿಗೂ ತಿಳಿಸು. ಕೇಳಿ ನಾವೂ ಸಂತೋಷ ಪಡತೇವೆ.

**ಕಪ್ಪೆಮರಿ:** ಹೇಳ್ತೇನೆ. ಆದರೆ ನೀವು ಒಂದು ಮಾತು ಕೊಡಬೇಕು.

**ಆನೆ:** ಏನ್ ಹೇಳು!

**ಕಪ್ಪೆಮರಿ:** ಏನಿಲ್ಲಾ, ನಾನು ವಿಷಯವನ್ನ ತಿಳಿಸಿದ ಮೇಲೆ ನೀವು ಕೋಪಿಸಿಕೊಳ್ಳಬಾರದು ಮತ್ತು ನನ್ನನ್ನ ಹೊಡೆಯಲು ಬರಬಾರದು.

**ಆನೆ:** ಆಯಿತು ಮರಿ, ಈಕೋ ಮಾತುಕೊಟ್ಟೆ: ನಾನು ಕೋಪಾನೂ ಮಾಡಿಕೊಳ್ಳೋದಿಲ್ಲಾ; ನಿನ್ನನ್ನ ಹೊಡೆಯೋದೂ ಇಲ್ಲ.

**ಕಪ್ಪೆಮರಿ:** ನಾನು ನಿಮ್ಮೆಲ್ಲರನ್ನು ಬಿಟ್ಟು ಹುಡುಕತಾ ಹುಡುಕತಾ, ದೂರ ದೂರ ಹೋದೆ. ಸಮುದ್ರ ತೀರ ಸೇರಿದೆ. ಅಲ್ಲೊಂದು ಮೀನು ಇತ್ತು. ಆ ಮೀನಿನ ಜೊತೆ ಗೆಳೆತನ ಬೆಳೆಯಿತು. ಅದಕ್ಕೆ ಪ್ರಶ್ನೆ ಕೇಳಿದೆ. ಈ ಜಗತ್ತಿನಲ್ಲಿ ಅತೀ ದೊಡ್ಡ ಪ್ರಾಣಿ ಯಾವುದು? ಗೊತ್ತಾ ನಿನಗೆ ಅಂತ. ಅದು ಕೂಡಲೇ ನನ್ನನ್ನ ತನ್ನ ಬೆನ್ನ ಮೇಲೆ ಕೂಡಿಸಿಕೊಂಡು ನೀರೊಳಗೆ ಹೋಯಿತು. ಸ್ವಲ್ಪ ದೂರ ಹೋದಮೇಲೆ ಒಂದು ಬೆಟ್ಟದಂತ ಪ್ರಾಣಿ ಕಾಣಿಸಿತು. ಅದು ನಮ್ಮ ಆನೆರಾಯರಿಗಿಂತ ಸುಮಾರು 20 ಪಟ್ಟು ದೊಡ್ಡದಿತ್ತು.

**ಆನೆ:** ಹೌದಾ?! ಯಾವುದದು? ಏನದರ ಹೆಸರು?

**ಕಪ್ಪೆಮರಿ:** ಅದರ ಹೆಸರು ನೀಲಿತಿಮಿಂಗಲ! ಅದು ಸುಮಾರು 30 ಮೀಟರ್ ಉದ್ದ, 6 ಮೀಟರ್ ಅಗಲ. ಹಾಗೂ ಅದರ ತೂಕ ಅಂದಾಜು 180 ಟನ್ ಇರುತ್ತೆ!

**ಎಲ್ಲ ಪ್ರಾಣಿಗಳು:** (ಅಚ್ಚರಿಯಿಂದ) ಓಹ್, ಹೌದಾ?!

**ಆನೆ:** ಇರಬಹುದು ಇರಬಹುದು. ನನಗೇನು ಹೊಟ್ಟೆಕಿಚ್ಚು ಇಲ್ಲ ಬಿಡಿ. ಜಗತ್ತಿನಲ್ಲಿ ನನಗಿಂತಲೂ ದೊಡ್ಡಪ್ರಾಣಿ ಇದ್ದರೆ ಇರಲಿ ಬಿಡಿ. ತಪ್ಪೇನಿದೆ. (ಖುಷಿಯಿಂದ ನಗುತ್ತದೆ).

**ತಾಯಿಕಪ್ಪೆ:** ಆದರೂ, ಒಂದು ಮಾತು: ಇಡೀ ಜಗತ್ತಿನಲ್ಲಿ ನೀಲಿತಿಮಿಂಗಲ ಅತ್ಯಂತ ದೊಡ್ಡ ಪ್ರಾಣಿ ಇದ್ದಿರಬಹುದು. ಅದು ನೀರಲ್ಲಿ ಇದೆ. ನೆಲದ ಮೇಲಿನ ದೊಡ್ಡಪ್ರಾಣಿ

ಅಂದರೆ ಸುಮಾರು 10 ಅಡಿ ಎತ್ತರ, ಅಂದಾಜು 8 ರಿಂದ 9 ಟನ್ ತೂಕ ಇರುವ ಈ ನಮ್ಮ ಆನೆರಾಯರೇ ಅಲ್ವೇ?!

**ಎಲ್ಲಪ್ರಾಣಿಗಳು:** ಹೌದು ಹೌದು. ನಿಜ ನಿಜ.

**ಆನೆ:** ಇರಲಿ ಇರಲಿ. ಅಂತೂ ನಮ್ಮ ಪುಟ್ಟ ಕಪ್ಪೆಮರಿ ಈ ಸತ್ಯವನ್ನು ಕಂಡುಕೊಂಡು, ನಮಗೆ ಎಲ್ಲರಿಗೂ ಆ ಸತ್ಯವನ್ನು ತಿಳಿಸಿದೆ. ಅದನ್ನು ಎಲ್ಲರೂ ಅಭಿನಂದಿಸೋಣ.

**ಎಲ್ಲವೂ:** ಕಪ್ಪೆಮರಿ ಕಪ್ಪೆಮರಿ
ನಮ್ಮ ಪುಟ್ಟ ಪುಟ್ಟಿಮರಿ
ಮಾಡಿ ದೂರ ದೂರ ಸವಾರಿ
ಅಂಜದೇ ಅಳುಕದೇ
ನಿಜವ ತಿಳಿದು ಬಂದೆ
ನಮಗೆ ಜ್ಞಾನ ನೀಡಿದೆ.
ನಿನಗೆ ಜಯವಾಗಲೀ;
ನಿಜಕೆ ಜಯವಾಗಲೀ

(ಎಲ್ಲವೂ ಕಪ್ಪೆ ಮರಿ ಸುತ್ತ ಕುಣಿಯುತ್ತವೆ)
(ನಿಧಾನವಾಗಿ ರಂಗದ ಮೇಲೆ ಕತ್ತಲೆ ಮೂಡುತ್ತದೆ)

******




**ಸಂಪರ್ಕ ಮಾಹಿತಿ**

ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬, 'ಪುಷ್ಪಾಂಜಲಿ'
೩ನೇ ಅಡ್ಡರಸ್ತೆ, ಶಿವಗಿರಿ
ಧಾರವಾಡ – ೫೮೦ ೦೦೭
ಮೊ: ೯೯೮ ೬೬೬ ೧೦೫೫
dhwanitrust@gmail.com
www.dhwanitrust.org



**ಗಮನಿಸಿ :**
ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.